**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 684/2014.**

ಪಿ.ಡಬ್ಲ್ಯೂ: 1

ಸಿ.ಡಬ್ಲ್ಯೂ: 1

| | | |
|---|---|---|
| ಹೆಸರು | ಃ | ಕೆ.ಹೆಚ್. ಶಿವಕುಮಾರ್, |
| ತಂದೆಯ ಹೆಸರು | ಃ | ಎನ್.ಹುಚ್ಚಪ್ಪ, |
| ವಯಸ್ಸು | ಃ | 53 ವರ್ಷ, |
| ಉದ್ಯೋಗ | ಃ | ಉಪ-ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, |
| ವಾಸಸ್ಥಳ | ಃ | ಶಿವಮೊಗ್ಗ. |

**ದಿನಾಂಕಃ 22-09-2016 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ**

1. ದಿಃ12-09-2013 ರಿಂದ ದಿಃ11-05-2015 ರವರೆಗೆ ನಾನು ತರೀಕೆರೆ ತಲ್ಲೂಕಿನಲ್ಲಿ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಆ ಸಂದರ್ಭದಲ್ಲಿ ತರೀಕೆರೆ ತಲ್ಲೂಕು ಲಕ್ಕವಳ್ಳಿ ಹೋಬಳಿಯ ಅರಸೀಕೆರೆ ಗ್ರಾಮದ ಸರ್ವೇ ನಂ.7/ಪಿ2 ರಲ್ಲಿ 357 ಎಕರೆ ಪ್ರದೇಶವಿರುತ್ತದೆ. ಅದರಲ್ಲಿ 257 ಎಕರೆ ಕೃಷಿ ವಿಶ್ವವಿದ್ಯಾನಿಲಯಕ್ಕೂ ಹಾಗೂ 100 ಎಕರೆ ಕಂದಾಯ ಇಲಾಖೆಯ ಹೆಸರನಲ್ಲಿ ಪಹಣಿ ಇರುತ್ತದೆ. ಸದರಿ ಭೂಮಿಯಲ್ಲಿ ಸೀತಾರಾಮ್ 35 ಇಂಟು 70 ಅಡಿ ವಿಸ್ತೀರ್ಣದ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಗ್ರಾಮ ಪಂಚಾಯಿತಿಯ ಪಿ.ಡಿ.ಓ. ಜೊತೆ ಶಾಮೀಲಾಗಿ ಅಕ್ರಮವಾಗಿ ಖಾತೆಯನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ತದನಂತರ ಈ ಒತ್ತುವರಿಯನ್ನು ತೆರವುಗೊಳಿಸಲು ಭೂ

ಕಂದಾಯ ಕಾಯಿದೆ 192(ಎ) ಅಡಿಯಲ್ಲಿ ತೆರವುಗೊಳಿಸಲು ದಿಃ30-11-2013 ರಂದು ನೋಟೀಸನ್ನು ಸದರಿ 03 ಜನರಿಗೂ ನೀಡಿರುತ್ತೇನೆ. ತದನಂತರ ದಿಃ05-12-2013 ರಂದು ತಾಲ್ಲೂಕು ಸರ್ವೇಯರ್ ಮೂಲಕ ಅಳತೆ ಮಾಡಿಸಿ ಒತ್ತುವರಿ ಮಾಡಿರುವುದನ್ನು ನಾನು ದೃಢಪಡಿಸಿಕೊಂಡಿರುತ್ತೇನೆ. ಅವರುಗಳು ಒತ್ತುವರಿಯನ್ನು ತೆರವುಗೊಳಿಸದಿದ್ದಾಗ ದಿಃ04-03-2014 ರಂದು ಹೊರದೂಡಲ್ಪಟ್ಟ ಆದೇಶವನ್ನು ಮಾಡಿರುತ್ತೇನೆ. ದಿಃ05-03-2014 ಕ್ಕೆ ಲಕ್ಕವಳ್ಳಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ಸದರಿ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಲಿಖಿತವಾಗಿ ಕೋರಿರುತ್ತೇನೆ.

ಸದರಿ ಪೋಲೀಸರಿಗೆ ನೀಡಿದ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತನನ್ನು ಹೊರದೂಡುವ ಆದೇಶದ ದೃಢೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿಗೆ ಸಾಕ್ಷಿ ಭೂ-ಕಂದಾಯ ಅಧಿನಿಯಮ 64 ರ ಅಡಿಯಲ್ಲಿ ನೋಟೀಸನ್ನು ನೀಡಿದ್ದು ಸದರಿ ನೋಟೀಸಿನ ದೃಢೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 1ನೇ ಆರೋಪಿ ಪರಃ ಶ್ರೀ. ಎ.ಆರ್.ಕೆ. ವಕೀಲರಿಂದ.**

ತರೀಕೆರೆ ತಾಲ್ಲೂಕಿನ ತಹಶೀಲ್ದಾರ್ ನ್ಯಾಯಾಲಯ, ತರೀಕೆರೆ ಇಲ್ಲಿ ಪ್ರಕರಣ ಸಂಖ್ಯೆಃ49/2013-14 ರಂತೆ ನೋಟೀಸನ್ನು ಕಳುಹಿಸಿರುತ್ತೇವೆ ಎಂದರೆ ಸರಿ. ನಿ.ಪಿ-2 ನ್ನು ನೀಡುವ ಮೊದಲು ಸ್ವತ್ತಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ತನ್ನ ಹೆಸರಿಗೆ ನಮೂದಿಸುವಂತೆ ಕೋರಿ 1ನೇ ಆರೋಪಿ 2ನೇ ಆರೋಪಿಗೆ ದಾಖಲಾತಿಗಳನ್ನು ನೀಡಿರುವ ಕುರಿತು ಪರಿಶೀಲನೆ ಮಾಡಿಲ್ಲ. 1ನೇ ಆರೋಪಿ ಸ್ವತ್ತಿಗೆ ಸಂಬಂಧಿಸಿದಂತೆ ಸ್ವಾಧೀನದಲ್ಲಿ

ಇರುವ ಕುರಿತು ನಾನು ಖುದ್ದಾಗಿ ಪರಿಶೀಲನೆ ಮಾಡಿರುವುದಿಲ್ಲ ನನ್ನ ಅಧೀನ ಅಧಿಕಾರಿಗಳು ಪರಿಶೀಲನೆ ಮಾಡಿರುತ್ತಾರೆ. ನಿ.ಪಿ-2 ರಲ್ಲಿ ನಮೂದಿಸಿರುವ ಸರ್ವೇ ನಂ.7/ಪಿ2 357 ಎಕರೆ ಇರುತ್ತದೆ. ಆ ಸರ್ವೇ ನಂಬರ್‌ನಲ್ಲಿ 387 ಎಕರೆ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರಿಗೆ 257 ಎಕರೆ ಜಮೀನನ್ನು ಸರ್ಕಾರ ನೀಡಿರುತ್ತದೆ ಎಂದರೆ ಸರಿ. 1ನೇ ಆರೋಪಿ ಅತಿಕ್ರಮ ಮಾಡಿಕೊಂಡಿದ್ದಾನೆಂದು ಹೇಳಲಾಗುವ ಸ್ವತ್ತು ಕಂದಾಯ ಇಲಾಖೆಗೆ ಸೇರಿದ ಸ್ವತ್ತಾಗಿರುತ್ತದೆ. 1ನೇ ಆರೋಪಿ ಅತಿಕ್ರಮ ಮಾಡಿದ್ದಾನೆಂದು ಹೇಳಲಾದ ಸ್ವತ್ತು ಈಗ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ರವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಸದರಿ ಸ್ವತ್ತಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ರವರು ತಡೆಗೋಡೆಯನ್ನು ನಿರ್ಮಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ನಿ.ಪಿ-1 ನ್ನು ನಾನು ನೋಡಿರುತ್ತೇನೆ. ನಿ.ಪಿ-1 ರಿಂದ ನಿ.ಪಿ-3 ರ ದಾಖಲಾತಿಗಳಲ್ಲಿ ಗ್ರಾಮಗಳು ಭಿನ್ನವಾಗಿರುತ್ತದೆ ಎಂದರೆ ಸರಿ. ಆದ್ದರಿಂದ, 1ನೇ ಆರೋಪಿ ಯಾವ ಸ್ವತ್ತನ್ನು ಅತಿಕ್ರಮ ಮಾಡಿದ್ದಾನೆಂದು ಸರಿಯಾದ ಮಾಹಿತಿ ನಮಗೆ ಇಲ್ಲ ಎಂದರೆ ಸಾಕ್ಷಿ ನಿ.ಪಿ-1 ರಿಂದ ನಿ.ಪಿ-3 ದಾಖಲೆಗಳನ್ನು ಕೊಟ್ಟಾ ಮಾಹಿತಿ ಇರಲಿಲ್ಲ ನಂತರದಲ್ಲಿ ಭೂ-ಮಾಪಕರು ನೀಡಿದ ವರದಿಯಂತೆ ಮಾಹಿತಿ ತಿಳಿಯಿತೆಂದು ಸಾಕ್ಷ್ಯ ನುಡಿಯುತ್ತಾರೆ. ಆದ್ದರಿಂದ, ಆದೇಶ ಮಾಡಿರುವ, ದೂರನ್ನು ನೀಡಿರುವ ಹಾಗೂ ಖುಲ್ಲಾ ಮಾಡಿರುವ ಸ್ವತ್ತಿನ ಗ್ರಾಮ ಭಿನ್ನವಾಗಿರುತ್ತದೆ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. 1ನೇ ಆರೋಪಿ ಯಾವುದೇ ಸ್ವತ್ತನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿಲ್ಲ ಹಾಗೂ ಅಕ್ರಮವಾಗಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

1ನೇ ಆರೋಪಿಯ ವಿರುದ್ಧ ದೂರನ್ನು ಸಲ್ಲಿಸುವ ಸಮಯದಲ್ಲಿ 1ನೇ ಆರೋಪಿಯು ತಾಲ್ಲೂಕು ಪಂಚಾಯಿತಿಯ ಚುನಾಯಿತ ಸಧಸ್ಯನೆಂದರೆ ಸರಿ. ರಾಜಕೀಯ ಒತ್ತಡಕ್ಕೆ

ಮಣಿದು 1ನೇ ಆರೋಪಿಯ ವಿರುದ್ಧ ಆತನನ್ನು ರಾಜಕೀಯವಾಗಿ ತೇಜೋವಧೆ ಮಾಡಲು ಸದರಿ ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ-1 ರಲ್ಲಿ ಎಷ್ಟು ವರ್ಷದ ಹಿಂದೆ ಖಾತೆಯನ್ನು ಮಾಡಿಸಿಕೊಂಡಿದ್ದಾರೆಂದು ಹಾಗೂ ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆಂದು ನಮೂದಿಸಿಲ್ಲ ಎಂದರೆ ಸರಿ. ಈ ಪ್ರಕರಣದ ಕುರಿತು ನನಗೆ ಖಚಿತ ಮಾಹಿತಿ ಇಲ್ಲದಿದ್ದಾಗ್ಯೂ ರಾಜಕೀಯ ಒತ್ತಡದಿಂದ ದೂರುದಾರರಾದ ಚೆನ್ನಪ್ಪನ ಮಾತನ್ನು ಕೇಳಿ ಈ ದೂರನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ 2ನೇ ಆರೋಪಿ ಪರಃ ಶ್ರೀ. ಕೆ.ಸಿ. ವಕೀಲರಿಂದ.</u>**

1ನೇ ಆರೋಪಿ ಅತಿಕ್ರಮಣ ಮಾಡಿದ್ದಾರೆಂಬ ವಿಷಯ ಚೆನ್ನಪ್ಪ ಎಂಬುವವರು ದೂರನ್ನು ನೀಡಿದ ನಂತರ ಗೊತ್ತಾಗಿರುತ್ತದೆ ಎಂದರೆ ಸರಿ. ಅದಕ್ಕಿಂತ ಪೂರ್ವದಲ್ಲಿ ಈ ಕುರಿತು ನನಗೆ ಯಾವುದೇ ಮಾಹಿತಿ ಇರಲಿಲ್ಲ. 1ನೇ ಆರೋಪಿ ಅತಿಕ್ರಮ ಪ್ರವೇಶ ಮಾಡಿರುವುದರ ಕುರಿತು ನೋಟೀಸನ್ನು ಜಾರಿ ಮಾಡಿರುತ್ತೇವೆ. 2ನೇ ಆರೋಗೆ ಸ್ಥಳವನ್ನು ಖುಲ್ಲಾಪಡಿಸಲು ನೋಟೀಸನ್ನು ನೀಡಿದ್ದೆನು. 1ನೇ ಆರೋಪಿ ವಸಂತ್‌ಶೆಟ್ಟಿಯವರ ಮಗ ಎಂದರೆ ಸರಿ. ಸದರಿ ವಸಂತ್‌ಶೆಟ್ಟಿಯವರು ಗ್ರಾಮ ಪಂಚಾಯಿತಿ ಸಧಸ್ಯರು ಆಗಿರುತ್ತಾರೆಂದರೆ ನನಗೆ ಗೊತ್ತಿಲ್ಲ, ಆದರೆ ಅವರು ರಾಜಕೀಯವಾಗಿ ಪ್ರಾಬಲ್ಯರಾಗಿದ್ದರು ಎಂದು ನನಗೆ ಗೊತ್ತು.

ದೂರುದಾರ ಚೆನ್ನಪ್ಪ 2005-06 ನೇ ಸಾಲಿನಲ್ಲಿ ಸದರಿ ಪಂಚಾಯಿತಿಯಲ್ಲಿ ಅಧ್ಯಕ್ಷನಾಗಿರುವುದರ ಕುರಿತು ನನಗೆ ಮಾಹಿತಿ ಇಲ್ಲ. ಸದರಿ ದೂರುದಾರ ಚೆನ್ನಪ್ಪನವರು ತನ್ನ ಅಧ್ಯಕ್ಷತೆಯ ಸಮಯದಲ್ಲಿ ಕೆಲವೊಂದು ನಿವೇಶನಗಳನ್ನು ಅಕ್ರಮವಾಗಿ ಅಸೆಸ್‌ಮೆಂಟ್ ಮಾಡಿಸಿಕೊಂಡು ಬಸವರಾಜಪ್ಪ ಎಂಬುವವರಿಗೆ ಮಾರಾಟಮಾಡಿದ್ದರು ಎಂಬ ವಿಷಯ ನನಗೆ ಗೊತ್ತಿಲ್ಲ. 2ನೇ ಆರೋಪಿ ದೂರುದಾರ ಚೆನ್ನಪ್ಪನವರ ಅಕ್ರಮವನ್ನು ಪ್ರತಿಭಟಿಸಿ

ಬಯಲಿಗೆಳೆದರು ಎಂಬ ವಿಷಯ ನನಗೆ ಗೊತ್ತಿಲ್ಲ. ಈ ಕಾರಣದಿಂದ ದೂರುದಾರ ಚೆನ್ನಪ್ಪ 2ನೇ ಆರೋಪಿಯ ವಿರುದ್ಧ ದೂರನ್ನು ನೀಡಿರುತ್ತಾರೆಂಬ ವಿಷಯ ನನಗೆ ಗೊತ್ತಿಲ್ಲ. ಸದರಿ ಚೆನ್ನಪ್ಪನವರ ಅಕ್ರಮದ ಕುರಿತು ಸಭೆಯಲ್ಲಿಟ್ಟು ಪ್ರತಿಭಟಿಸಿದ್ದರ ಕುರಿತು ನನಗೆ ಮಾಹಿತಿ ಇಲ್ಲ. ಆ ಕಾರಣದಿಂದ ದೂರುದಾರ ಚೆನ್ನಪ್ಪ 2ನೇ ಆರೋಪಿಯ ಮೇಲೆ ಒತ್ತಡವನ್ನು ಹೇರಿರುವ ಕುರಿತು ನನಗೆ ಮಾಹಿತಿ ಇಲ್ಲ. ದೂರುದಾರ ಚೆನ್ನಪ್ಪನ ನಡವಳಿಕೆಯ ಕುರಿತು ನನಗೆ 2ನೇ ಆರೋಪಿ ಮೌಖಿಕವಾಗಿ ಹೇಳಿದ್ದರು ಎಂದರೆ ಸರಿಯಲ್ಲ.

2ನೇ ಆರೋಪಿಯ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. 2ನೇ ಆರೋಪಿಯ ವಿರುದ್ಧ ನಾನು ಯಾವುದೇ ದೂರನ್ನು ನೀಡಿಲ್ಲ. 2ನೇ ಆರೋಪಿಯು ಯಾವುದೇ ರೀತಿಯ ತಪ್ಪನ್ನು ಎಸಗದಿದ್ದರೂ ಸಹ ಈ ಕೇಸಿನಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಅಧ್ಯಕ್ಷರ ವಾಪ್ತಿಯಲ್ಲಿ ತಿದ್ದುಪಡಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದೂರುದಾರರ ಚೆನ್ನಪ್ಪನವರಿಗೆ ಸಂಬಂಧಿಸಿದ ಸ್ವತ್ತಿನ ಅಸೆಸ್‌ಮೆಂಟನ್ನು ಸೇರಿಸುವುದಿಲ್ಲವೆಂದು ಹೇಳಿದ ಕಾರಣದಿಂದ ಈ ದೂರನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಸ್ವತ್ತಿಗೆ ಸಂಬಂಧಿಸಿದ ಅಸೆಸ್‌ಮೆಂಟನ್ನು ನಮೂದಿಸಿರುವುದಲ್ಲಿ 2ನೇ ಆರೋಪಿಯ ಪಾತ್ರವಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಯಾವುದೇ ಅಕ್ರಮದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ದಾಖಲಾತಿಗಳಿಗೂ ಹಾಗೂ ಈ ಪ್ರಕರಣದ ದೂರಿಗೂ ಯಾವುದೇ ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಯಾವುದೇ ಆರೋಪವನ್ನು ಮಾಡದಿದ್ದರೂ ಕೂಡ ಸುಳ್ಳು ದೂರನ್ನು ನೀಡಿರುತ್ತೇವೆ.

2ನೇ ಆರೋಪಿಯು ಖಾತೆಯನ್ನು ಬದಲಾಯಿಸಿಕೊಡುವಂತೆ 1ನೇ ಆರೋಪಿ ಒತ್ತಡವನ್ನು ಹೇರುತ್ತಿದ್ದಾರೆಂಬ ವಿಷಯವನ್ನು ನನಗೂ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ತಿಳಿಸಿದ್ದರು ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದ ಸ್ವತ್ತಿನ

ದಾಖಲಾತಿ ತಿದ್ದುಪಡಿಯಾದ ಸಮಯದಲ್ಲಿ 2ನೇ ಆರೋಪಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಬದಲಾಗಿ ಲಕ್ಷ್ಮಣನಾಯ್ಕರವರು ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲವೆಂದು ಸಾಕ್ಷ್ಯ ನುಡಿಯುತ್ತಾರೆ. ಸಾಮಾನ್ಯವಾಗಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಮೇಲೆ ದೂರುಗಳು ಬರುತ್ತವೆ ಎಂದರೆ ಸರಿ. ಈ ಕಾರಣದಿಂದಾಗಿ ಒತ್ತಡಕ್ಕೆ ಒಳಗಾಗಿ ಆತ್ಮಹತ್ಯೆ ಪ್ರಕರಣಗಳು ನಡೆದಿರುತ್ತವೆ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.